**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ**

**ಸಿಸಿಃನಂಃ 41/2025**

**ಸಿ.ಡಬ್ಲ್ಯೂಃ 1**
**ಪಿ.ಡಬ್ಲೂಃ** 1

**ಸಾಕ್ಷಿದಾರರ ಹೆಸರು ಃ ಜಯ**
**ಗಂಡನ ಹೆಸರು ಃ ಸುಬ್ರಮಣ್ಯ**
**ವಯಸ್ಸು ಃ 43 ವರ್ಷ**
**ಉದ್ಯೋಗ ಃ ಗೃಹಿಣಿ**
**ವಾಸಸ್ಥಳ ಃ ಅಕ್ಷರನಗರ, ಬಾಳೆಹೊನ್ನೂರು**

**ದಿನಾಂಕಃ 4.5.2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

1 ಮತ್ತು 2 ನೇ ಆರೋಪಿತರು ನಮ್ಮ ಊರಿನವರು ನನಗೆ ಅವರ ಪರಿಚಯ ಇದೆ. ಚಾಸಾ-4 ನನ್ನ ಅತ್ತಿಗೆ. ಚಾಸಾ-5 ಮತ್ತು 6 ರವರು ನೆರೆಮನೆಯವರು. ಚಾಸಾ-7 ಮತ್ತು 8 ರವರು ನನ್ನ ಮಕ್ಕಳು. ನನಗೆ ಈ ಪ್ರಕರಣದಲ್ಲಿ ಯಾವುದೇ ಮಾಹಿತಿ ತಿಳಿದಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದು ದೂರಾಗಿದ್ದು ಅದನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ನಿಪಿ-1 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದು ಸ್ಥಳ ಮಹಜರ್ ಆಗಿದ್ದು ಅದನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ಭಾವಚಿತ್ರವನ್ನು ತೆಗೆದಿದ್ದು ಅದರಲ್ಲಿರುವ ತನ್ನ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-2 ರಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ನಿಪಿ-3 ಭಾವಚಿತ್ರವನ್ನು ಯಾವ ಕಾರಣಕ್ಕಾಗಿ ಪೊಲೀಸರು ತೆಗೆದರು ಎಂದು ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದು ಸಾಕ್ಷಿಯ ಹೇಳಿಕೆಯನ್ನು ಕಲಂ 183(6) ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಅಡಿಯಲ್ಲಿ ದಾಖಲಾಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-4, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ನಾನು ಆರೋಪಿತರಿಂದ ಹಲ್ಲೆಗೊಳಗಾಗಿ ಯಾವುದೇ ಚಿಕಿತ್ಸೆಯನ್ನು ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಯಲ್ಲಿ ಪಡೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**ಃಃಪಾಟೀ ಸವಾಲುಃ ಮಾನ್ಯ ಎಪಿಪಿಯವರಿಂದಃಃ**

ದಿನಾಂಕಃ 27.8.2024 ರಂದು ರಾತ್ರಿ ಸುಮಾರು 9.00 ಗಂಟೆ ಸಮಯದಲ್ಲಿ ಸಲೀಂ ರವರ ಮನೆಯ ಮುಂಭಾಗ ಚಾಸಾ-2 ರಿಂದ 4 ಸಾಕ್ಷಿದಾರರು ನಿಂತುಕೊಂಡಿದ್ದರು ಆ ಸಂದರ್ಭದಲ್ಲಿ 1 ನೇ ಆರೋಪಿತರು ನನ್ನನ್ನು ತಬ್ಬಿಕೊಂಡು ಮಾನಭಂಗ ಮಾಡುವ ಉದ್ದೇಶದಿಂದ ಬಲಪ್ರಯೋಗ ಮಾಡಿದರು ಆಗ ನಾನು ಅವರನ್ನು ದೂರ ತಳ್ಳಿದೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ 1 ನೇ ಆರೋಪಿತರು ನನ್ನ ಸೀರೆಯನ್ನು ಎಳೆದು ನನಗೆ ಮಾನಹಾನಿ ಉಂಟಾಗುವಂತೆ ಬಲಪ್ರಯೋಗ ಮಾಡಿದರು ಎಂದರೆ ಸರಿಯಲ್ಲ. ನಾನು ಆ ಸಂದರ್ಭದಲ್ಲಿ ಕಿರುಚಿಕೊಂಡಾಗ ಸ್ಥಳದಲ್ಲಿದ್ದ ಚಾಸಾ-4 ರವರು ಬಂದು 1 ನೇ ಆರೋಪಿತರಿಂದ ನನ್ನನ್ನು ಬಿಡಿಸಿರುತ್ತಾರೆಂದರೆ ಸರಿಯಲ್ಲ. ಅದೇ ಸಂದರ್ಭದಲ್ಲಿ 1 ಮತ್ತು 2 ನೇ ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಉಂಟಾದ ಹಲ್ಲೆಯಿಂದ ನನಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ 2 ನೇ ಆರೋಪಿತರು ಚಾಸಾ-4 ರವರ ಕೈಯನ್ನು ಕಚ್ಚಿದ್ದರು ಎಂದರೆ ಸರಿಯಲ್ಲ. ನಾನು ಕೃತ್ಯದ ಬಗ್ಗೆ ಪೊಲೀಸರಿಗೆ ನಿಪಿ-1 ರಂತೆ ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ. ನಾನು ಚಾಸಾ-2 ಮತ್ತು 3 ರವರ ಸಮಕ್ಷಮ ಕೃತ್ಯ ನಡೆದ ಸ್ಥಳವನ್ನು ಪೊಲೀಸರಿಗೆ ದಿನಾಂಕಃ 6.9.2024 ರಂದು ಬೆಳಗ್ಗೆ 11.30 ರಿಂದ 12.30 ರವರೆಗೆ ಸ್ಥಳದಲ್ಲಿಯೇ ದಾಖಲಿಸಿಕೊಂಡು ನನ್ನ ಸಹಿ ಪಡೆದಿರುತ್ತಾರೆಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಿಪಿ-3 ರಂತೆ ಒಂದು ಭಾವಚಿತ್ರವನ್ನು ತೆಗೆದುಕೊಂಡಿರುತ್ತಾರೆಂದರೆ ಸರಿಯಲ್ಲ. ನಾನು ಆರೋಪಿತರೊಂದಿಗೆ ಶರಿಕ್

ಆಗಿರುವುದರಿಂದ ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಿನಾಂಕಃ 1.10.2024 ರಂದು ಕೊಪ್ಪ ನ್ಯಾಯಾಲಯದಲ್ಲಿ ಕಲಂ 183(6) ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಅಡಿಯಲ್ಲಿ ಹೇಳಿಕೆ ನೀಡಿರುತ್ತೇನೆಂದರೆ ಸಾಕ್ಷಿಯು ಪೊಲೀಸರು ಹೇಳಿದಂತೆ ಸಾಕ್ಷ್ಯ ಹೇಳಿರುತ್ತೇನೆಂದು ನುಡಿಯುತ್ತಾರೆ.

**ಃಪಾಟೀ ಸವಾಲು ಆರೋಪಿ ಪರ ಶ್ರೀ. ಕೆಜೆ ಪಿ  ವಕೀಲರಿಂದಃಃಇಲ್ಲಾಃಃ**

**ಃಃ ಮರು ವಿಚಾರಣೆ ಇಲ್ಲಃಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**